ಕವಿತೆ




ನಭಾ ಒಕ್ಕುಂದ

ಕಲೆ: ವಿಶ್ವನಾಥ್ ಎ.ಎಸ್.




# ಅವಳು

ಮುರುಟಿದಷ್ಟೂ ಮೊಳೆವ
ಚಿವುಟಿದಷ್ಟೂ ಚಿಗಿವ
ತುಳಿದಷ್ಟೂ ಹದದ
ಜೀವ ತ್ರಾಣವೀ ಹೆಣ್ಣು

ಹರಿವ ನದಿ ಇತ್ತಳು ದಡದಡಕೂ
ಸಿಹಿಗೂ ಕಹಿಗೂ ಸಮಪಾಲು ಕರುಳಬಾಳು

ಅಲೆ ಅಲೆವ ಗಾಳಿ ಹೊತ್ತಳು
ಸುಗಂಧವನೂ ದುರ್ಗಂಧವನೂ ಎಡೆಯ ಪಾಲು
ಉಡಿ ಕಟ್ಟಿದಳು ನಿತಾಂತವನು ನಿಸ್ತಂತುವನು
ನದ–ನದಿಗಳಲಿ ಮುಳುಮುಳುಗಿ ತಾರೆಯಾಗಿ
ದುಡಿದುಡಿದು ಹೊಳಪು ಉಕ್ಕಿ ಜೀವಜಾತವಾಗಿ

ಇವಳು
ಕಲ್ಲ ಕೊರಕಲದಲೂ ಪುಟಿವ ಸೆಲೆ
ಒರೆಸಲಾಗದ ಗಿಟು ಅಳಿಸಬಾರದ ಚರಿತೆ
ಮನದ ಕಣಕಣದಲೂ ಬಸಿರ ಕಸುವುಕ್ಕಿದಳು
ಕೆಂಡ ಹಾಯಿಸಿದರೆ ಬೆಂಕಿ ಬಣ್ಣವನುಟ್ಟವಳು



ಇವಳು
ಹೂ, ಎಲೆ, ಬಳ್ಳಿ,ಮರ ತೂಗುಚಪ್ಪರ
ಇವಳು ಇಲಿ, ಅಳಿಲು, ಜಿಂಕೆ, ಹುಲಿ, ಒಂಟೆ, ಆನೆ
ಇವಳು ಮಣ್ಣು. ಕಲ್ಲು. ಕಸ. ಮುಸುರೆ
ಬೃಂದಾವನ
ಇವಳು ನಾನು, ನೀನು, ನಾವು, ನೀವು
ಚರವೂ ಅಚರವೂ